# 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
# ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :29 ಸಿಡಬ್ಲು :26

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ.ನೀಲವ್ವ ಬೆಳಗಲಿ |
| ಗಂಡನ ಹೆಸರು | : | ಶ್ರೀ.ಬನಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 04-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 25, ಚಾಸಾಃ 27 ರಿಂದ ಚಾಸಾಃ 34 ರವರು ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು ಮತ್ತು ನಮ್ಮ ಸಮಾಜದವರು. ಚಾಸಾಃ 36 ರಿಂದ ಚಾಸಾಃ 44 ರವರು ಗೊತ್ತಿರುತ್ತಾರೆ. ಚಾಸಾಃ 35 ಸತ್ಯನಾರಾಯಣ ಅವರು ಚೀಫ್ ಆಫೀಸರ ಅವರು ಮತ್ತು ಚಾಸಾಃ 44 ಕಾಶಿಲಿಂಗ ಅವರು ಮುಖ್ಯಾಧಿಕಾರಿಯವರು ಇರುತ್ತಾರೆ. ನ್ಯಾಯಾಲಯಲ್ಲಿ ವಿಚಾರಣೆಗೆ ಹಾಜರಾಗಿರುವ ಆರೋಪಿತರು ನನಗೆ ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು, ಅವರು ಜೈನ ಸಮಾಜಕ್ಕೆ ಸೇರಿದ್ದಾರೆ. ನಾನು ಹಿಂದೂ ಪರಿಶಿಷ್ಟ ಜಾತಿಯ ಮಾದರ ಜನಾಂಗಕ್ಕೆ ಸೇರಿದ್ದೇನೆ.

2. ಯಲ್ಲಮ್ಮದೇವಿ ಪಾದಗಟ್ಟೆಯ ಹತ್ತಿರ ಇರುವ ಜಮೀನು ಸರ್ಕಾರಿ ಜಮೀನು ಆಗಿದ್ದು, ಅದರಲ್ಲಿ ಬಾಬನ್ನವರ [ಆರೋಪಿತರು] ಕಟ್ಟಡ ಕಟ್ಟುತ್ತಿದ್ದರು. ನಮ್ಮ

ಜನಾಂಗದವರು ಹೋಗಿ ಚೀಫ್ ಆಫೀಸರ ಅವರನ್ನು ಕರೆದುಕೊಂಡು ಬಂದರು. ನಾನು ಆಗ ಕೂಲಿ ಕೆಲಸಕ್ಕೆ ಹೋಗಿದ್ದೇನು. ನಾನು ಕೆಲಸದಿಂದ ವಾಪಸ್ ಬರುವಷ್ಟರಲ್ಲಿ ನಮ್ಮ ಜನಾಂಗಕ್ಕೂ, ಆರೋಪಿತರಿಗೂ ಜಗಳ ನಡೆಯುತ್ತಿತ್ತು. ಆರೋಪಿತರು ನಮ್ಮ ಜಾತಿ ಹೆಸರು ಹಿಡಿದು ಬೈಯುತ್ತಿದ್ದರು. ಆರೋಪಿತರು ನಮ್ಮ ಜನಾಂಗದವರಿಗೆ ಕಬ್ಬಿಣದ ರಾಡ್, ಬಡಿಗೆ ಮತ್ತು ಕಲ್ಲುಗಳಿಂದ ಹೊಡೆಯುತ್ತಿದ್ದರು. ಜಗಳದಲ್ಲಿ ಕಲ್ಲು ಹೊಡೆಯುತ್ತಿದ್ದರಿಂದ ನನಗೆ ಕಲ್ಲು ತಗುಲಿ ನನ್ನ ಬಲಗೈ ಮುಂಗೈಗೆ ಗಾಯ ಆಗಿತ್ತು. ಸುಮಾರು 7 ಜನರಿಗೆ ಹೆಚ್ಚಿನ ಗಾಯ ಆಗಿತ್ತು. ಗಾಯಾಳುಗಳೆಲ್ಲರೂ ಮೊದಲಿಗೆ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಹೋಗಿದ್ದರು. ನಾನೂ ಸಹ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಆ ನಂತರ ದೂರು ನೀಡಲಾಯಿತು.

3. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಹಾಗೂ ರಾಯಬಾಗ ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ಈ ಹಿಂದೆ ಹೇಳಿಕೆ ನೀಡಿದ್ದೇನೆ. ಆರೋಪಿತರು ನಮ್ಮ ಜನಾಂಗದವರಿಗೆ ಹೊಡೆದ ಕಬ್ಬಿಣದ ರಾಡ್, ಬಡಿಗೆ ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ ಎಲ್ಲಾ ಆರೋಪಿತರು ಆ ದಿನ ಆದ ಜಗಳದಲ್ಲಿ ಹಾಜರಿದ್ದರು ಮತ್ತು ಇತರರು ಇದ್ದರು ಎಂದು ಹೇಳಿದ್ದಾರೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕಬ್ಬಿಣದ ರಾಡ್, ಬಡಿಗೆ ಮತ್ತು ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 5 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ನಾನು ಪ್ರತಿ ದಿನ ಬೆಳಗ್ಗೆ 7:00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 4:00 ಗಂಟೆಗೆ ಮನೆಗೆ ಬರುತ್ತೇನೆ. ಗಲಾಟೆ ಆದ ದಿನ ನಾನು ಬೆಳಗ್ಗೆ 10:00 ಗಂಟೆಗೆ ಮನೆಗೆ ವಾಪಸ್ ಬಂದಿದ್ದೇನೆ. ಗಲಾಟೆ ಆದ ದಿನ ನನ್ನ ಮಗ ಗಲಾಟೆ ಆಗುತ್ತಿದೆ ಎಂದು ನನ್ನನ್ನು ಕರೆಯಲು

ಬಂದಿದ್ದನು, ಆ ಕಾರಣ ನಾನು ಬೆಳಗ್ಗೆ 10:00 ಗಂಟೆಗೆ ಬಂದಿದ್ದೇನೆ. ನಮ್ಮ ಮನೆಯ ಸಮೀಪ ಇರುವ ಕದಮ ಅವರ ಜಮೀನಿನಲ್ಲಿ ನಾನು ಆ ದಿನ ಕೂಲಿ ಕೆಲಸಕ್ಕೆ ಹೋಗಿದ್ದೇನು, ನನ್ನ ಮಗ ಶ್ರೀಶೈಲ 10:00 ಗಂಟೆಗೆ ನನ್ನನ್ನು ಕರೆಯಲು ಬಂದಿದ್ದನು, ನಾನು ಕೂಡಲೇ ಬಂದಿದ್ದೇನೆ.

2. ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ನನ್ನ ಮಗ ಶ್ರೀಶೈಲ ನನ್ನನ್ನು ಕರೆಯಲು ಬಂದಿದ್ದನು ಎಂದು ಹೇಳಿದ್ದೇನೆ. ವಿವಾದಿತ ಜಾಗ ಬಾಬನ್ನವರ ಕುಟುಂಬಕ್ಕೆ ಸಂಬಂಧಪಟ್ಟ ಜಾಗ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸರ್ಕಾರಿ ಜಾಗ ಎಂದು ಹೇಳಿದ್ದಾರೆ. ಆರೋಪಿತರು ಪಂಚಾಯತಿಯಿಂದ ಅನುಮತಿ ಪಡೆದು ಕಟ್ಟಡ ಕಟ್ಟುತ್ತಿದ್ದರು ಎನ್ನುವುದು ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಚೀಫ್ ಆಫೀಸರ ಅವರು ಬಂದಿದ್ದರು, ಗಲಾಟೆ ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಗಲಾಟೆಯಲ್ಲಿ ನನ್ನ ಬಲಗೈ ಮುಂಗೈಗೆ ಪೆಟ್ಟಾಗಿತ್ತು ಎಂದು ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕೂಲಿ ಕೆಲಸಕ್ಕೆ ಹೋದಾಗ ಹೊಲದಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

3. ಆರೋಪಿತರು ಜಾತಿ ಹೆಸರು ಹಿಡಿದು ಬೈದರು ಎಂದು, ನಮ್ಮ ಜನಾಂಗದವರಿಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ.

4. ನ್ಯಾಯಾಲಯದಿಂದ ನೋಟಿಸ ಬಂದ ಕಾರಣ ನಾನೇ ಖುದ್ದಾಗಿ ನ್ಯಾಯಾಲಯಕ್ಕೆ ಬಂದಿದ್ದೇನೆ. ನಾನು ರಾಯಬಾಗ ಕೋರ್ಟಿಗೆ ಹೋದಾಗ 4 ಜನ ಪೋಲಿಸರು ನನ್ನೊಂದಿಗೆ ಬಂದಿದ್ದರು. ಪೋಲಿಸರು ಹೇಳಿಕೊಟ್ಟ ಪ್ರಕಾರ ನಾನು ನ್ಯಾಯಾಲಯದಲ್ಲಿ

ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಈ ಪ್ರಕರಣದ ಬಗ್ಗೆ ವೈಯಕ್ತಿಕವಾಗಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾಃ 1 ಬಸಪ್ಪ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ಮು.ಮಾ.1 ರಿಂದ 5 ರಂತಹ ವಸ್ತುಗಳು ಎಲ್ಲಾ ಸ್ಥಳಗಳಲ್ಲಿ ಸಿಗುತ್ತವೆ ಎನ್ನುವುದಕ್ಕೆ ಸಾಕ್ಷಿಯು ಅವುಗಳು ಜಗಳವಾದ ಸ್ಥಳದಲ್ಲಿ ಇದ್ದವು ಎಂದು ಹೇಳಿದ್ದಾರೆ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ**

3 ರಿಂದ 34 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.